**ಸಾಕ್ಷಿಯನ್ನು ದಿನಾಂಕಃ 27.06.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಬಿ.ಎಸ್.ಎಸ್. ವಕೀಲರಿಂದಃ**

1 ನೇ ಪ್ರತಿವಾದಿ ನನಗೆ ಚಿಕ್ಕಮ್ಮನಾಗಬೇಕು. 2 ರಿಂದ 4 ನೇ ಪ್ರತಿವಾದಿಗಳು ನನ್ನ ಚಿಕ್ಕಮ್ಮನಾದ 1 ನೇ ಪ್ರತಿವಾದಿಯ ಮನೆಯಲ್ಲಿ ವಾಸವಿರುತ್ತಾರೆಂದರೆ ಸರಿ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಅಣ್ಣನ ಮಗಳ ಮಗ. 3 ಹಾಗು 4 ನೇ ಪ್ರತಿವಾದಿಗಳು 2 ನೇ ಪ್ರತಿವಾದಿಯ ಮಕ್ಕಳು. 2 ರಿಂದ 4 ನೇ ಪ್ರತಿವಾದಿಗಳು ಸಹ ನನಗೆ ಸಂಬಂಧಿಕರು ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ 2 ರಿಂದ 4 ನೇ ಪ್ರತಿವಾದಿಗಳ ಹೆಸರನ್ನು ಹಾಗು ತಂದೆಯ ಹೆಸರನ್ನು ತಪ್ಪಾಗಿ ನಮೂದಿಸಿರುತ್ತೇನೆಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಹೆಸರು ವೆಂಕಟನಾಯಕ ಆಗಿದ್ದು, ಕೂಸಪ್ಪ ನಾಯಕ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅವರ ಹೆಸರನ್ನು ಹಿಂದಿನಿಂದಲೂ ಕೂಸಪ್ಪನಾಯಕ ಎಂತಲೇ ಕರೆಯಲಾಗುತ್ತಿತ್ತು ಎಂದು ನುಡಿಯುತ್ತಾರೆ. ಅದೇ ರೀತಿ 3 ನೇ ಪ್ರತಿವಾದಿಯ ಹೆಸರು ರಂಗಸ್ವಾಮಿ ವಿ. ಎಂಬುವುದಾಗಿದ್ದು, ಅವರ ತಂದೆಯ ಹೆಸರು ವೆಂಕಟನಾಯಕ ಆಗಿದ್ದು ರಂಗನಾಯಕ ತಂದೆ ಕೂಸಪ್ಪನಾಯಕ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅವರ ಹೆಸರನ್ನು ಹಿಂದಿನಿಂದಲೂ ರಂಗನಾಯಕ ಎಂತಲೇ ಕರೆಯಲಾಗುತ್ತಿತ್ತು ಎಂದು ನುಡಿಯುತ್ತಾರೆ. ಅದೇ ರೀತಿ 4 ನೇ ಪ್ರತಿವಾದಿಯ ಹೆಸರು ರಾಜು ವಿ. ಎಂಬುವುದಾಗಿದ್ದು, ಅವರ ತಂದೆಯ ಹೆಸರು ವೆಂಕಟನಾಯಕ ಆಗಿದ್ದು ರಾಜನಾಯಕ ತಂದೆ ಕೂಸಪ್ಪನಾಯಕ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅವರ ಹೆಸರನ್ನು ಹಿಂದಿನಿಂದಲೂ ರಾಜನಾಯಕ ಎಂತಲೇ ಕರೆಯಲಾಗುತ್ತಿತ್ತು ಎಂದು ನುಡಿಯುತ್ತಾರೆ.

ನಾನು ಈ ದಾವೆಯನ್ನು ಹೂಡುವಾಗ ದಾವಾ ಅನುಸೂಚಿ-ಎ ಹಾಗು ಬಿ ರಲ್ಲಿ ಚಾಕಹಳ್ಳಿ ಗ್ರಾಮ ಎಂತಲೂ ನಂತರ ತಿದ್ದುಪಡಿ ಮಾಡಿಕೊಂಡು ಹೆಚ್.ಡಿ. ಕೋಟೆ ಗ್ರಾಮ ಎಂದು ನಮೂದಿಸಿರುತ್ತೇನೆಂದರೆ ಸರಿ. ಪ್ರತಿವಾದಿಗಳು ಚಾಕಹಳ್ಳಿ ಗ್ರಾಮದ ಆಸ್ತಿಗೆ ಸಂಬಂಧಿಸಿದಂತೆ ವಾದಿ ಮಾಲೀಕರಲ್ಲಾ ಹಾಗು ಸ್ವಾಧೀನದಲ್ಲಿಲ್ಲ ಎಂದು ಪ್ರತಿವಾದ ಪತ್ರ ಸಲ್ಲಿಸಿದ್ದು ಸದರಿ ಪ್ರತಿವಾದ ಪತ್ರ ಸಲ್ಲಿಸಿದ ನಂತರ ನಾನು ಮೇಲೆ ಹೇಳಿದಂತೆ ತಿದ್ದುಪಡಿ ಮಾಡಿಕೊಂಡಿರುತ್ತೇನೆಂದರೆ ಸರಿ. ನಾನು ಸಲ್ಲಿಸಿದ ದಾವಾ ಪತ್ರದಲ್ಲಿ ಎಲ್ಲಿಯೂ ಕೂಡ 1 ನೇ ಪ್ರತಿವಾದಿ ನನ್ನ ಚಿಕ್ಕಮ್ಮ ಎಂದು ನಮೂದಿಸಿಲ್ಲ ಎಂದರೆ ಸರಿ. ನನ್ನ ತಂದೆ ಹಾಗು 1 ನೇ ಪ್ರತಿವಾದಿಯ ಗಂಡ ಸ್ವಂತ ಅಣ್ಣ-ತಮ್ಮಂದಿರು ಎಂದರೆ ಸರಿ. ನನ್ನ ತಂದೆ ಹಾಗು ಅವರ ಸಹೋದರರು ಅಂದರೆ ನನ್ನ ಚಿಕ್ಕಪ್ಪಂದಿರು ಬಹಳ ಹಿಂದೆಯೇ ಒಟ್ಟು ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಆ ರೀತಿ ವಿಭಾಗವಾದ ನಂತರ ನಾವು ಹಾಗು ನನ್ನ ತಂದೆ ಹೆಚ್.ಡಿ. ಕೋಟೆ ಗ್ರಾಮವನ್ನು ಬಿಟ್ಟು ಚಾಕಹಳ್ಳಿ ಗ್ರಾಮದಲ್ಲಿ ವಾಸಿಸಲು ಆರಂಭಿಸಿದೆವು ಎಂದರೆ ಸರಿ. ನಂತರ ನಾನು ಹಾಗು ನನ್ನ ಸಹೋದರರು ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದೆವು ಎಂದರೆ ಸರಿ. ದಾವಾ ಆಸ್ತಿಗಳನ್ನು ಸಹ ನಾವು ವಿಭಾಗ ಮಾಡಿಕೊಂಡು ಅದರಲ್ಲಿ ಅನುಸೂಚಿ-ಎ ಆಸ್ತಿ ನನ್ನ ಭಾಗಕ್ಕೆ ಹಾಗು ಅನುಸೂಚಿ-ಬಿ ಆಸ್ತಿ ನನ್ನ ಸಹೋದರನಾದ 2 ನೇ ವಾದಿಯ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿ. ನಾನು ಹಾಗು 2 ನೇ ವಾದಿ ನಮ್ಮ ಭಾಗಕ್ಕೆ ಬಂದ ದಾವಾ-ಎ ಹಾಗು ಬಿ ಆಸ್ತಿಯ ಪ್ರತ್ಯೇಕ ಸ್ವಾಧೀನಾನುಭವದಲ್ಲಿರುವುದರಿಂದ ನಾನು ಹಾಗು 2 ನೇ ವಾದಿ ಜೊತೆಯಾಗಿ ಈ ದಾವೆಯನ್ನು ಹೂಡಲು ಬರುವುದಿಲ್ಲವೆಂದರೆ ಸರಿ.

ಪ್ರತಿವಾದಿಗಳು ಯಾವ ದಿನಾಂಕ, ತಿಂಗಳು ಹಾಗು ವರ್ಷ ನಮ್ಮ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟಿರುತ್ತಾರೆಂದು ನನಗೆ ನಿರ್ದಿಷ್ಟವಾದ ದಿನ ನೆನಪಿರುವುದಿಲ್ಲ. ನನ್ನ ಚಿಕ್ಕಮ್ಮನಾದ 1 ನೇ ಪ್ರತಿವಾದಿಗೆ ಈಗ ಸುಮಾರು 85 ವರ್ಷ ಆಗಿರುತ್ತದೆಂದರೆ ಸರಿ. ಅವರಿಗೆ ವಯೋಸಹಜ ಖಾಯಿಲೆಗಳಿದ್ದು, ಓಡಾಡಲು ಆಗದೇ ಮನೆಯಲ್ಲಿಯೇ ಕುಳಿತಿರುತ್ತಾರೆಂದರೆ ಸರಿ. 1 ನೇ ಪ್ರತಿವಾದಿ ಹಾಗು ಅವರ ಗಂಡನಾದ ಕೆಂಪನಾಯಕರವರ ದಾಂಪತ್ಯದಿಂದ ಯಾವುದೇ ಮಕ್ಕಳಾಗಿರಲಿಲ್ಲವೆಂದರೆ ಸರಿ. ಆ ರೀತಿ ಮಕ್ಕಳಿಲ್ಲದೇ ಇರುವುದರಿಂದ 1 ನೇ ಪ್ರತಿವಾದಿ ಹಾಗು ಅವರ ಗಂಡ ಹೆಚ್.ಡಿ. ಕೋಟೆಯ ಲಿಂಗನಾಯಕನ ಮಗಳಾದ ಸರ್ವಮಂಗಳ @ ಮಂಗಳಮ್ಮ ಎನ್ನುವವರನ್ನು ದತ್ತು ಪಡೆದಿದ್ದರು ಎಂದರೆ ಸರಿ. ಸದರಿ ಸರ್ವಮಂಗಳ @ ಮಂಗಳಮ್ಮ ಸವ್ವೆ ಗ್ರಾಮದ ತಿಮ್ಮನಾಯಕರವರ ಮಗ ವೆಂಕಟನಾಯಕ ಎನ್ನುವವರೊಂದಿಗೆ ಮದುವೆ ಮಾಡಿಸಿ ಅವರನ್ನು ತಮ್ಮ ಮನೆಯಲ್ಲಿಯೇ ಇರಿಸಿಕೊಂಡಿದ್ದರು ಎಂದರೆ ಸರಿ. ಸದರಿ ಸರ್ವಮಂಗಳ @ ಮಂಗಳಮ್ಮರವರ ಗಂಡನಾದ ವೆಂಕಟನಾಯಕನನ್ನೇ ಈ ದಾವೆಯಲ್ಲಿ 2 ನೇ ಪ್ರತಿವಾದಿ ಕೂಸಪ್ಪನಾಯಕ ಎಂದು ನಮೂದಿಸಿರುತ್ತೇವೆಂದರೆ ಸರಿ. ಸದರಿ ಸರ್ವಮಂಗಳ @ ಮಂಗಳಮ್ಮನ ಗಂಡ ವೆಂಕಟನಾಯಕ ಎನ್ನುವುದು ಆಕೆ ಮದುವೆಯಾದ ಸಮಯದಿಂದಲೂ ನಮಗೆ ಗೊತ್ತಿದ್ದಾಗ್ಯೂ ಸಹ ಆತನ ಹೆಸರನ್ನು ಕೂಸಪ್ಪನಾಯಕ ಎಂದು ತಪ್ಪಾದ ಹೆಸರು ಮತ್ತು ವಿಳಾಸವನ್ನು ನೀಡಿ ಈ ದಾವೆ ಹೂಡಿರುತ್ತೇವೆಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನಾದ 1 ನೇ ಪ್ರತಿವಾದಿ ಹಾಗು ಅವರ ಗಂಡನಿಗೆ ಮಕ್ಕಳಿಲ್ಲದ ಕಾರಣ ಅವರ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾವೇ ಅವರಿಗೆ ತೊಂದರೆ

ಕೊಡುತ್ತಿದ್ದೇವೆಂದರೆ ಸರಿಯಲ್ಲ. ನಾವು 1 ನೇ ಪ್ರತಿವಾದಿಗೆ ಸೇರಿದ ಹೆಚ್.ಡಿ. ಕೋಟೆ ಸ.ನಂ. 353 ಹಾಗು 166 ಆಸ್ತಿಗಳಿಗೆ ತೊಂದರೆ ಕೊಟ್ಟಿದ್ದರಿಂದ ಊರಿನವರನ್ನು ಕರೆಸಿ ಪಂಚಾಯಿತಿ ಮಾಡಿಸಲಾಗಿತ್ತು ಎಂದರೆ ಸಾಕ್ಷಿಯು ಪಂಚಾಯಿತಿ ಮಾಡಿಸಿರುವುದು ನಿಜ ಆದರೆ ನಾವು ಯಾವುದೇ ತೊಂದರೆ ಕೊಟ್ಟಿರುವುದಿಲ್ಲವೆಂದು ನುಡಿಯುತ್ತಾರೆ. ಆ ರೀತಿ ಪಂಚಾಯಿತಿ ತೀರ್ಮಾನದಂತೆ ನಾವು ನಡೆದುಕೊಳ್ಳದೇ ಇದ್ದುದರಿಂದ 1 ನೇ ಪ್ರತಿವಾದಿ ನನ್ನ ವಿರುದ್ದ ಈ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ: 383/2022 ರಂತೆ ಹೂಡಿದ್ದು, ಸದರಿ ದಾವೆ ಈಗ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆಂದರೆ ಸರಿಯಲ್ಲ. ಪ್ರತಿವಾದಿಗಳು ನಾನು ದಾವಾ ಪತ್ರದಲ್ಲಿ ತಿಳಿಸಿರುವಂತೆ ಯಾವುದೇ ತೊಂದರೆಯನ್ನು ಕೊಡದೇ ಇದ್ದಾಗ್ಯೂ ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದಾಗ್ಯೂ ಸಹ ಪ್ರತಿವಾದಿಗಳ ವಿರುದ್ದ ಈ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**